# ವಿಶ್ವನಂದಿನಿ ಲೇಖನಮಾಲೆ — 70

## ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ
## ಇಪ್ಪತ್ತೊಂಭನೆಯ ಪದ್ಯ

ಕೇವಲ ಭಕ್ತಿ ಮಾಡಿದವರನ್ನಲ್ಲ, ಅಸುರಾವೇಶದಿಂದ ದ್ವೇಷವನ್ನು ಮಾಡಿದವರಿಗೂ ಪರಮಾತ್ಮ ಅವರ ಅಸುರಾವೇಶವನ್ನು ನಾಶಪಡಿಸಿ ಸದ್ಗತಿಯನ್ನೀಯುವ ಕರುಣಾಳು ಎಂದು ಚಿಂತಿಸುತ್ತಾರೆ —

ಸುಮನಸರ ವೈರದಲಿ ಕೆಲಬರು
ಕುಮತಿಗಳು ತಪದಿಂದ ಭರ್ಗನ
ಕಮಲಜನ ಪದಯುಗವ ಮೆಚ್ಚಿಸಿ ವರವ ಪಡೆದಿಹರು ।
ಸಮರಮುಖದೊಳಗುಪಮೆಯಲಿ ವಿ
ಕ್ರಮದಿ ವೈರವ ಮಾಡಿದವರಿಗೆ
ಅಮರಪದವಿಯನಿತ್ತೆ ರಕ್ಷಿಸು ನಮ್ಮನನವರತ ॥ ೨೯ ॥

'ಕೆಲಬರು' ಕೆಲವರು 'ಕುಮತಿಗಳು' ಅಸುರರ ಆವೇಶಕ್ಕೊಳಗಾಗಿ ಕುಮತಿಯನ್ನು ಪಡೆದ

ಸಜ್ಜೀವರು ಎಂದರ್ಥ. ಸ್ವಾಭಾವಿಕವಾಗಿ ಪರಮಾತ್ಮನನ್ನು ದ್ವೇಷ ಮಾಡುವವರಿಗೆ ಎಂದಿಗೂ ಸದ್ಗತಿಯಾಗುವದಿಲ್ಲ ಎಂದು ಶ್ರೀಮದಾಚಾರ್ಯರು ಅನುವ್ಯಾಖ್ಯಾನಾದಿ ಗ್ರಂಥಗಳಲ್ಲಿ ಪ್ರಮಾಣಪುರಸ್ಸರವಾಗಿ ಪ್ರತಿಪಾದನೆ ಮಾಡಿದ್ದಾರೆ[1].

ಅಸುರಾವೇಶಕ್ಕೊಳಗಾಗಿ ಭಗವದ್ದ್ವೇಷವನ್ನು ಮಾಡುವ ಜನ ತಪದಿಂದ ತಪಸ್ಸಿನಿಂದ 'ಭರ್ಗನ' ರುದ್ರದೇವನ 'ಕಮಲಜನ' ಬ್ರಹ್ಮದೇವರ 'ಪದಯುಗವ' ಪಾದಗಳನ್ನು ಮೆಚ್ಚಿಸಿ 'ವರವ ಪಡೆದಿಹರು' ಒಲಿಸಿಕೊಂಡು ವರವನ್ನು ಪಡೆಯುತ್ತಾರೆ.

ಅಂತಹವರು 'ಸಮರಮುಖದೊಳಗೆ' ಯುದ್ಧದ ಆರಂಭದಲ್ಲಿ ವಿಕ್ರಮದಿ ಪರಾಕ್ರಮದಿಂದ 'ವೈರವ ಮಾಡಿದವರಿಗೆ' ವೀರಭಾವವನ್ನು ತೋರಿದವರಿಗೆ 'ಅಮರಪದವಿಯನಿತ್ತೆ' ಎಂದಿಗೂ ಮರಣವಿಲ್ಲದ ಮೋಕ್ಷಪದವಿಯನ್ನು ನೀನು ನೀಡುವೆ. ಓ

---

[1] ದ್ವೇಷದಿಂದ ಮುಕ್ತಿಯಾಗಲು ಸಾಧ್ಯವಿಲ್ಲ ಎಂಬ ವಿಷಯವನ್ನು ಉಪನ್ಯಾಸದಲ್ಲಿ ವಿಸ್ತೃತವಾಗಿ ವಿವರಿಸಿದ್ದೇನೆ. VNU402

ಕರುಣಾಳು, ನನ್ನೆಲ್ಲ ಅಪರಾಧಗಳನ್ನು ಮನ್ನಿಸಿ ಅನವರತ ರಕ್ಷಿಸು.
ಯಾವುದೇ ಪರಾಕ್ರಮಿಯಾದರೂ ಪರಮಾತ್ಮನೊಡಗಿನ ಯುದ್ಧದ ಆರಂಭದಲ್ಲಿ ಮಾತ್ರ ತನ್ನ ಪರಾಕ್ರಮವನ್ನು ತೋರಬಲ್ಲ. ಯುದ್ಧದ ಕಡೆಯಲ್ಲಿ ಪರಮಾತ್ಮನೇ ಅವನನ್ನು ಕೊಲ್ಲುವದರಿಂದ ಅವನ ಪರಾಕ್ರಮಕ್ಕೆ ಬೆಲೆ ಇರುವದಿಲ್ಲ. ಪರಾಕ್ರಮವಿದ್ದರೆ ಅವನು ಯಾವ ಕಾರಣಕ್ಕಾಗಿ ಹತನಾದಾನು ? ಹೀಗಾಗಿ ಪರಮಾತ್ಮನ ಜತೆಯಲ್ಲಿ ಸೆಣಸಾಡುವವರ ಪರಾಕ್ರಮವೆಲ್ಲ ಯುದ್ಧದ ಆರಂಭದಲ್ಲಿಯೇ ಹೊರತು, ಅಂತ್ಯದಲ್ಲಲ್ಲ. ಅದೂ ಪರಮಾತ್ಮ ಕರುಣೆ ತೋರಿ ಮಂದವಾಗಿ ಅವರೊಡನೆ ಯುದ್ಧವಾಡುವದರಿಂದ. ಅದಕ್ಕಾಗಿ ದಾಸರು ಸಮರಮುಖದೊಳಗೆ, ಸಮರದ ಆರಂಭದಲ್ಲಿ ಎಂಬ ಶಬ್ದವನ್ನು ಬಳಸಿದ್ದಾರೆ.

ವೃಷಭ ಎಂಬ ದೈತ್ಯನ ಆವೇಶಕ್ಕೊಳಗಾದ ಸಜ್ಜನ ರುದ್ರದೇವರ ವರದಿಂದ ದೃಪ್ತನಾಗಿ ವೇಂಕಟಾದ್ರಿಯಲ್ಲಿ ಋಷಿಗಳನ್ನು ಹಿಂಸಿಸುತ್ತಿರುತ್ತಾನೆ. ಬಳಿಕ ಪರಮಾತ್ಮನನ್ನು

ಒಲಿಸಿಕೊಂಡು ಯುದ್ಧಭಿಕ್ಷೆಯನ್ನು ಬೇಡುತ್ತಾನೆ. ಪರಮಾತ್ಮ ಕರುಣಿಸುತ್ತಾನೆ. ಈ ವೃಷಭ ವಿಧವಿಧವಾಗಿ ತನ್ನ ಪರಾಕ್ರಮವನ್ನು ತೋರುತ್ತಾನೆ. ಶ್ರೀಹರಿ ನಗುತ್ತಾ ಅವನ ಜತೆಯಲ್ಲಿ ಅವನ ಪರಾಕ್ರಮವನ್ನು ಆಸ್ವಾದಿಸುವವನ ಹಾಗೆ ಕಾದಾಡಿ ಕಡೆಯಲ್ಲಿ ಚಕ್ರದಿಂದ ಅವನ ತಲೆಯನ್ನು ತರಿದು ಹಾಕುತ್ತಾನೆ.

ಅಸುರಾವೇಶಕ್ಕೊಳಗಾದ ಜಯ ವಿಜಯರು ಮೂರು ಬಾರಿ ಭಗವದ್‌ದ್ವೇಷಿಗಳಾಗಿ ಹುಟ್ಟುತ್ತಾರೆ. ಶ್ರೀಹರಿ ಅವರಿಗಾಗಿ ನಾಲ್ಕು ರೂಪಗಳನ್ನು ಸ್ವೀಕರಿಸಿ ಅವರ ಜತೆಯಲ್ಲಿ ಕಾದಾಡಿ ಅವರ ಪರಾಕ್ರಮವನ್ನು ಜಗತ್ತಿಗೆ ತೋರಿಸಿ “ರಾಮರಾವಣಯೋರ್ಯುದ್ಧಂ ರಾಮರಾವಣಯೋರಿವ” ಎಂಬ ಹೆಗ್ಗಳಿಕೆ ಅವರಿಗೆ ಬರುವಂತೆ ಮಾಡಿ ಅವರನ್ನು ಕೊಂದು, ಅವರಲ್ಲಿನ ಅಸುರರನ್ನು ತಮಸ್ಸಿಗೆ ಕಳುಹಿಸಿ ಆ ಸಜ್ಜೀವರನ್ನು ಉದ್ಧರಿಸುತ್ತಾನೆ ॥ ೨೯ ॥

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು
ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,
ಶ್ರೀ ವೇದವ್ಯಾಸದೇವರಿಗೆ
ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491